<u>ದಿನಾಂಕ : *25-07-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ಎದುರುದಾರರ ಪರವಾಗಿ ಶ್ರೀ. ಆರ್. ಬಿ. ಬಿ ವಕೀಲರಿಂದ:</u>

ಶರಣಪ್ಪ ನಾರಾಯಣಪ್ಪ ಚವ್ಹಾಣ, ಸಾ.ಕೆದಿಗೇರಿ ಇವರು ಕಬ್ಬು ಕಡಿಯುವ ಗುಂಪಿನ ಮಾಲಕರು ಎಂದರೆ ಸರಿ. ಇವರು ಹೇಳಿದ ಪ್ರಕಾರ ನಾವು ಗುಂಪು ಕಟ್ಟಿಕೊಂಡು ಕಬ್ಬು ಕಡಿಯುವ ಸಲುವಾಗಿ ಹೋಗುತ್ತೇವೆ ಎಂದರೆ ಸರಿ. ನಮ್ಮ ಗುಂಪನ್ನು ಶರಣಪ್ಪ ನಾರಾಯಣಪ್ಪ ಚವ್ಹಾಣ ರವರು ಕರೆದುಕೊಂಡು ಹೋಗಿದ್ದರು. ನನ್ನ ಗಂಡ ಎದರುದಾರರ ಟ್ರ್ಯಾಕ್ಟರ ನಲ್ಲಿ ವಾಹನ ಚಾಲಕನಾಗಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ಎದುರುದಾರರ ಟ್ರ್ಯಾಕ್ಟರನಲ್ಲಿ ಚಾಲಕನಾಗಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಕಬ್ಬು ಕಡಿಯಲು ಹೋಗಿದ್ದ ಜಮೀನಿನ ಮಾಲೀಕರು ಎದರುದಾರರು ಆಗಿದ್ದರು. ಘಟನೆ ಆದಾಗ ಸದರಿ ಜಮೀನಿನ ಮಾಲೀಕರಾದ ಎದರುದಾರರು ಜಾಗೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಗಂಡನಿಗೆ ಎದರುದಾರರ ನೇರ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಟ್ರ್ಯಾಕ್ಟರ ಚಲಾಯಿಸು ಎದರುದಾರರು ಯಾವ ಕಾಲಕ್ಕೂ ಸೂಚನೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಎದರುದಾರರ ನಡುವೆ ಮಾಲೀಕ ಮತ್ತು ಕೆಲಸಗಾರ ಎನ್ನುವ ಸಂಬಂದ ಇರಲಿಲ್ಲ ಎಂದರೆ ಸರಿಯಲ್ಲ. ನಾವು ನಮ್ಮ ಕಬ್ಬಿನ ಗುಂಪಿನ ಮಾಲೀಕನ ಆದೇಶದ ಮೇರೆಗೆ ಕಂದಗಲ್ಲ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯಬೇಕು ಎನ್ನುವ ಉದ್ದೇಶದಿಂದ ಸದರಿ ದಾಖಲೆಗಳ ದುರುಪಯೋಗ ತೆಗೆದುಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.